# ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ. ನ್ಯಾಯಾಲಯ

## ಹಿರೇಕೆರೂರು

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 6

**ಪಿ.ಡಬ್ಲ್ಯೂಃ 4**

ಸಾಕ್ಷಿದಾರರ ಹೆಸರುಃ - ಶಶಿಕುಮಾರ

ತಂದೆಯ ಹೆಸರು - ಹೇಮಪ್ಪ ಹುಲ್ಲತ್ತಿ

ವಯಸ್ಸುಃ - 28 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ದೂದಿಹಳ್ಳಿ

ದಿನಾಂಕಃ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ - ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿಯ ಪರಿಚಯವಿರುತ್ತದೆ. ಮೃತ ಹೇಮಪ್ಪ ನನ್ನ ತಂದೆ. ಚಾಸಾ-1, 7 ರಿಂದ 12 ರವರ ಪರಿಚಯವಿರುತ್ತದೆ. ದಿಃ 09-04-2021 ರಂದು ಬೆಳಿಗ್ಗೆ 6-15 ರ ಸುಮಾರಿಗೆ ನನ್ನ ತಂದೆ ದೂದಿಹಳ್ಳಿ - ಹಿರೇಕೆರೂರು ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಲಾರಿಯೊಂದು ಡಿಕ್ಕಿ ಹೊಡೆದು ಅಪಘಾತ ಪಡಿಸಿದ ಎಂದು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ಕೂಡಲೇ ನಾನು ಹೋಗಿ ನೋಡಲಾಗಿ ಘಟನಾ ಸ್ಥಳದಲ್ಲಿ ಲಾರಿ ನಂಃ ಕೆ.ಎ.20/ ಸಿ-7129 ನಿಂತಿತ್ತು, ಚಾಸಾ-1, 8 ಮತ್ತು 9 ರವರು ಅಲ್ಲಿಯೇ ಇದ್ದರು. ಆರೋಪಿಯ ಹೆಸರು ತೌಸೀಫ್ ಎಂದು ತಿಳಿದುಬಂದಿತು. ಆರೋಪಿಯು ಲಾರಿಯನ್ನು ಅತೀ ವೇಗ ಹಾಗೂ ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನನ್ನ ತಂದೆಗೆ ಬಂದು ಡಿಕ್ಕಿ ಹೊಡೆದು ಅಪಘಾತ ಪಡಿಸಿರುತ್ತಾನೆ. ಪರಿಣಾಮ ನನ್ನ ತಂದೆ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ.

2. ಮೃತರ ದೇಹವನ್ನು ಹಿರೇಕೆರೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದು, ನನ್ನ ಸಮಕ್ಷಮ ನಿಪಿ-7 ರಂತೆ ಶವ ಪಂಚನಾಮೆಯನ್ನು ಜರುಗಿಸಿ, ನಿಪಿ-8 ರಿಂದ 11 ರ ಪೋಟೋ ತೆಗೆದಿರುತ್ತಾರೆ. ಈ ಸಂಬಂಧ ಹೇಳಿಕೆ ನೀಡಿರುತ್ತೇನೆ.

ಸಿ.ಸಿ. ನಂಃ 1054/2021

ಸಿ.ಡಬ್ಲ್ಯೂಃ 6

**ಪಿ.ಡಬ್ಲ್ಯೂಃ 4**

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ. ಎಚ್ . ಪಿ. ವಕೀಲರಿಂದಃ</u>**

ಚಾಸಾ-1 ರವರು ಹೇಳಿದ ಮೇರೆಗೆ ಅಪಘಾತ ಆಗಿರುವ ವಿಚಾರ ತಿಳಿದಿರುತ್ತದೆ ಎಂದರೆ ಸರಿ. ಆದ್ದರಿಂದ ಅಪಘಾತ ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನ್ನಿಂದ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ತಿರುವುಗಳು ಇವೆ ಎಂದರೆ ಸರಿ. ಆದ್ದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆಯ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು **)**

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 12-08-2025

ಸಹಿ/-

ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,

ಹಿರೇಕೆರೂರು